ಎಚ್ಚರದಿಂದ ಕಾಲುಗಳನ್ನು ಇಡಬೇಕಾದುದರಿಂದ ಆ ಪ್ರಶ್ನೆಯನ್ನು ಚಿಕ್ಕಮ್ಮನ ಬಳಿ ಕೇಳಲು ನಾನು ಮುಂದಾಗಲಿಲ್ಲ. ಅಷ್ಟೂ ಅಲ್ಲದೆ, ಆ ಹಾದಿ ಗಲೀಜು ಪಲೀಜಿನಿಂದ ಕೂಡಿದ್ದಲ್ಲ; ಸರಿಯಾದ, ಸಮಂಜಸವಾದ ಹಾದಿ ಎಂದು ಚಿಕ್ಕಮ್ಮ ಆ ಹಾದಿಯಲ್ಲಿ ಬಿರಬಿರನೆ ಸಾಗುತ್ತಿದ್ದಳು!

ಎರಡನೆಯ ಬಾರಿ ನಾನು ವಳಗೆರೆ ಹೊಕ್ಕಿದ್ದು ಮಂದಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಏಳನೆಯ ಇಯತ್ತೆ ಮುಗಿಸಿ, ಪರೀಕ್ಷೆಯಲ್ಲಿ ಉತ್ತೀರ್ಣನಾಗಿ, ಗೌರೀಪುರದ ಪ್ರೌಢಶಾಲೆಗೆ ಸೇರಿಕೊಳ್ಳಬೇಕು ಎನ್ನುವ ಸಂದರ್ಭದಲ್ಲಿ. ಗೌರೀಪುರ ನಮ್ಮ ಮಂದಳ್ಳಿಯಿಂದ ಸುಮಾರು ನಲವತ್ತು ಕಿಲೋಮೀಟರ್ ದೂರ ಇರುವ ಪುಟ್ಟ ಪಟ್ಟಣ. ಗೌರೀಪುರದಲ್ಲಿ ಪ್ರತಿ ಎರಡು ವರ್ಷಕ್ಕೊಮ್ಮೆ ನಡೆಯುವ ಮಾರಿಜಾತ್ರೆಗೆ ಒಂದೆರಡು ಸಲ ನಾನು ಹೋಗಿಬಂದದ್ದುಂಟು. ಮೂರು ಸಿನಿಮಾ ಟಾಕೀಸುಗಳಿದ್ದವು ಗೌರೀಪುರದಲ್ಲಿ. ಪ್ರತಿಯೊಂದು ರಸ್ತೆಯಲ್ಲಿಯೂ ಒಂದೋ ಎರಡೋ ಹೋಟೆಲ್‌ಗಳು. ಎಲ್ಲಾ ರಸ್ತೆಗಳಲ್ಲಿಯೂ ಬೀದಿ ದೀಪಗಳು. ಅಲ್ಲಲ್ಲಿ ದೊಡ್ಡ ದೊಡ್ಡ ಕಟ್ಟಡಗಳು. ಅರ್ಧ ತಾಸಿಗೊಂದೋ ಎರಡೋ ಎಂಬಂತೆ ಬಂದು ಹೋಗುವ ಬಸ್ಸುಗಳು. ಜಟಕಾಗಳು. ಹೊಸದಾಗಿ ಬಂದು ಭುರ್ ಎಂದು ಓಡಾಡುತ್ತಿದ್ದ ಮೂರು ಕಾಲಿನ ಕೆಲವೇ ಕೆಲವು ಮೂರು ಚಕ್ರದ ಆಟೋಗಳು. ಇಂಥ ಗೌರೀಪುರದಲ್ಲಿ ಪ್ರೌಢಶಾಲೆಯಲ್ಲಿ ಓದುವುದಕ್ಕೆ ನನಗೆ ಖುಷಿ ಇತ್ತು.

ಆದರೆ... ಸಮಸ್ಯೆ ಬಂದದ್ದು... ಗೌರೀಪುರದಲ್ಲಿ ಎಲ್ಲಿ ಉಳಿದುಕೊಳ್ಳುವುದು?

ಈ ಪ್ರಶ್ನೆ ಕಾಡಿದ್ದು ಚಿಕ್ಕಪ್ಪನಿಗೆ. ಚಿಕ್ಕಮ್ಮ ಈ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. 'ಎಲ್ಲಿಯಾದರೂ ಉಳಿದುಕೊಳ್ಳಲು ವ್ಯವಸ್ಥೆ ಮಾಡಿದರಾಯಿತು' ಎಂದು ತೀರಾ ನಿರುಂಬಳವಾಗಿ ಅಂದುಬಿಟ್ಟಳು ಚಿಕ್ಕಮ್ಮ. 'ಹಾಗೆ ಎಲ್ಲಿಯಾದರೂ ಅಂದರೆ ಎಲ್ಲಿ? ನಮ್ಮ ಸಂಬಂಧಿಕರು ಯಾರಾದರೂ ಇದ್ದಾರಾ ಗೌರೀಪುರದಲ್ಲಿ? ಇದ್ದರೂ ಅವರು ಇವನನ್ನು ತಮ್ಮ ಮನೆಯಲ್ಲಿ ಇರಿಸಿಕೊಂಡು ಓದಿಸಲು ಒಪ್ಪಬೇಕಲ್ಲಾ' ಎಂಬುದು ಚಿಕ್ಕಪ್ಪನ ಹೇಳಿಕೆ. 'ಯಾವುದಾದರೂ ಹಾಸ್ಟೆಲ್ಲೋ ಪಾಸ್ಟೆಲ್ಲೋ ನೋಡಿ ಸೇರಿಸಿದರಾಯಿತು' ಚಿಕ್ಕಮ್ಮನ ಸಮಾಧಾನದ ಮಾತು. 'ಓಹೋ... ನಿನ್ನ ಭಾವ ಅಕ್ಕನ ಮಗ ಲಕ್ಷಾಧೀಶ ನೋಡು; ಹಾಸ್ಟೆಲ್‌ನಲ್ಲಿ ಉಳಿಸಿ ತಿಂಗಳಾ ತಿಂಗಳಾ ನೂರಾರು ರೂಪಾಯಿ ಸುರಿಯೋಕೆ' ಎಂದಿದ್ದ ಚಿಕ್ಕಪ್ಪ. 'ರೊಕ್ಕ ಸುರಿದು ಹಾಸ್ಟೆಲ್‌ನಲ್ಲಿ ಉಳಿಸಬೇಕು ಅಂತ ಅಂದವರು ಯಾರು... ಪುಕ್ಕಟೆ ಅನ್ನಾ ಹಾಕೋ ಹಾಸ್ಟೆಲ್ ಗೌರೀಪುರದಲ್ಲಿ ಇಲ್ಲವಾ? ಅಂಥಾ ಯಾವುದಾದರೂ ಫ್ರೀ ಹಾಸ್ಟೆಲ್ ಹುಡುಕಿ ಅದರಲ್ಲಿ ಸೇರಿಸಿದರಾಯಿತು' ನಿರುಮ್ಮಳವಾಗಿ ಮತ್ತೆ ಬಂದಿತ್ತು ಚಿಕ್ಕಮ್ಮನಿಂದ ಪರಿಹಾರ.

ಭಾಸ್ಕರರಾಯರಿಗೆ ಕೊಟ್ಟು ಬರುವಂತೆ ಒಂದು ಪತ್ರ ಕೊಟ್ಟಳು ಚಿಕ್ಕಮ್ಮ. ಅಂಗಿಯ ಬಕ್ಕಣದದೊಳಗೆ ಪತ್ರ ಮಡಚಿಟ್ಟುಕೊಂಡು ವಳಗೆರೆಯ ಭಾಸ್ಕರರಾಯರ ಮನೆಗೆ ಹೊರಟೆ.ಈ ಸಲ ಚಿಕ್ಕಮ್ಮ ಬರಲಿಲ್ಲ; ನಾನೊಬ್ಬನೇ ಹೋದೆ ವಳಗೆರೆಗೆ.

ಅದೇ ಹೊಲಸು ಹಾದಿ. ತುಳಿಯಲು ಮನಸ್ಸಿಲ್ಲ. ಆದರೆ, ಅನಿವಾರ್ಯ; ಚಿಕ್ಕಮ್ಮನ ಆದೇಶ. ಜೊತೆಗೆ ಗೌರೀಪುರದಲ್ಲಿ ನಾನು ಉಳಿಯಲು ಭಾಸ್ಕರರಾಯರಿಂದ ಯಾವುದಾದರೂ ಬಗೆಯ ಸಹಾಯ ಕೋರಿ ಚಿಕ್ಕಮ್ಮ ಪತ್ರ ಬರೆದಿರಲೂಬಹುದು, ಅದೇ ಪತ್ರ ಇದಾಗಿರಲೂಬಹುದು ಎನ್ನುವ ನಿರೀಕ್ಷೆ.

ಹೊಕ್ಕೆ. ಮತ್ತೊಮ್ಮೆ ವಳಗೆರೆಯ ಭಾಸ್ಕರರಾಯರ ಮನೆಯನ್ನು ಹೊಕ್ಕೆ.

ಹಿಂದಿನ ಸಲ ಚಿಕ್ಕಮ್ಮನೊಂದಿಗೆ ಬಂದಿದ್ದಾಗಿನದೇ ಜಗುಲಿ. ಆದಿನ ಚಿಕ್ಕಮ್ಮ ನನ್ನನ್ನು ಇದೇ